# ಡಾ : ಸರೋಜಿನಿ ಮಹಿಷಿ ಸಮಿತಿ ವರದಿ ಮತ್ತು ಅದರ ಅನುಷ್ಠಾನ – ಒಂದು ಟಿಪ್ಪಣಿ

ವಾಣಿಜ್ಯ ಬ್ಯಾಂಕ್‌ಗಳನ್ನು ಒಳಗೊಂಡಂತೆ ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಲ್ಲಿ ಕರ್ನಾಟಕದ ಜನರ ಉದ್ಯೋಗದ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ : ಡಿಪಿಎಆರ್ 23 ಎಸ್‌ಆರ್‌ಆರ್ 83 ದಿನಾಂಕ 4–8–83ರಲ್ಲಿ ಶ್ರೀಮತಿ ಮಾರ್ಗರೇಟ್ ಆಳ್ವ, ಸಂಸತ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಮೊಟ್ಟಮೊದಲ ಬಾರಿಗೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿತು.

1. ಪ್ರೊ. ಗೋಪಾಲಕೃಷ್ಣ ಅಡಿಗ
2. ಶ್ರೀ ಜಿ.ಕೆ. ಸತ್ಯ
3. ಶ್ರೀ ಜಿ. ನಾರಾಯಣ ಕುಮಾರ್, ಶಾಸಕರು
4. ಶ್ರೀ ಕೆ. ಪ್ರಭಾಕರ ರೆಡ್ಡಿ

2. ಈ ಸಮಿತಿಗೆ ಈ ಕೆಳಕಂಡ ಮೂರು ವಿಷಯಗಳನ್ನು ಪರಿಶೀಲಿಸಲು ಒಪ್ಪಿಸಲಾಗಿತ್ತು.

ಅ. ಕೇಂದ್ರ ಸರ್ಕಾರದ ಅಧೀನಕ್ಕೊಳಪಡುವ ಸಾರ್ವಜನಿಕ ಉದ್ದಿಮೆಗಳು, ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳಲ್ಲಿ ಕರ್ನಾಟಕದ ಜನರ ಉದ್ಯೋಗದ ಬಗ್ಗೆ ಇರುವ ವಾಸ್ತವ ಸ್ಥಿತಿಯನ್ನು ಅಧ್ಯಯನ ಮಾಡುವುದು.

ಆ. ಅಂತಹ ಉದ್ಯಮಗಳಲ್ಲಿ ಕರ್ನಾಟಕಕ್ಕೆ ಸೇರಿದ ಉದ್ಯೋಗಿಗಳ ಸಮಸ್ಯೆಗಳು ಮತ್ತು ಕುಂದುಕೊರತೆಗಳನ್ನು ವಿಚಾರಿಸಿ, ಖಚಿತಪಡಿಸಿಕೊಳ್ಳುವುದು.

ಇ. ಸಮಿತಿಯು ಅವಶ್ಯವೆಂದು ಭಾವಿಸುವ ಯಾವುದೇ ನಿವಾರಣೋಪಾಯಗಳ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

3. ಶ್ರೀಮತಿ ಆಳ್ವ ಅವರು ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಲು ತಮ್ಮ ಅನಾನುಕೂಲತೆಯನ್ನು ವ್ಯಕ್ತಪಡಿಸಿದ್ದರಿಂದ, ಸರ್ಕಾರವು ತನ್ನ ಆದೇಶ ಸಂಖ್ಯೆ ಡಿಪಿಎಆರ್ 23 ಎಸ್‌ಆರ್‌ಆರ್ 83, ದಿನಾಂಕ 25–1–84 ರಲ್ಲಿ ಡಾ: ಸರೋಜಿನಿ ಮಹಿಷಿ, ಸಂಸತ್ ಸದಸ್ಯರು ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿತು.

4. ಅದೇ ಸಂಖ್ಯೆಯ ದಿನಾಂಕ 15–1–85ರ ಆದೇಶದಲ್ಲಿ ಸರ್ಕಾರವು ಈ ಕೆಳಕಂಡ ಇನ್ನಿಬ್ಬರು ಸದಸ್ಯರನ್ನು ಸಮಿತಿಗೆ ನೇಮಿಸಿತು.

ಶ್ರೀ ಬಿ.ಎಸ್. ಹನುಮಾನ್, ಐ.ಎ.ಎಸ್ (ನಿವೃತ್ತ)

ಡಾ. ಸಿದ್ದಯ್ಯ ಪುರಾಣಿಕ್, ಐ.ಎ.ಎಸ್. (ನಿವೃತ್ತ)

5. ಅದೇ ಸಂಖ್ಯೆಯ ದಿನಾಂಕ 28–6–85ರ ಆದೇಶದಲ್ಲಿ, ಸರ್ಕಾರವು ಡಾ. ಸರೋಜಿನಿ ಮಹಿಷಿ ಸಮಿತಿಯ ಕಾರ್ಯಕಲಾಪದ ವ್ಯಾಪ್ತಿಯನ್ನು ಖಾಸಗಿ ಉದ್ಯಮಗಳಿಗೂ ವಿಸ್ತರಿಸಿದೆ.

6. ಸಮಿತಿಯು ತನ್ನ ಕಕ್ಷೆಯಲ್ಲಿ ಬರುವಂತಹ ವಿಷಯಕ್ಕೆ ಸೀಮಿತವಾಗಿ, ಕನ್ನಡಿಗರೆಂದರೆ ಈ ಕೆಳಗಿನ ಷರತ್ತುಗಳು ಯಾರಿಗೆ ಅನ್ವಯಿಸುವುವೋ ಅವರು ಎಂಬುದಾಗಿ ತೀರ್ಮಾನಿಸಿತು :

ಅ. ಕನ್ನಡದಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಬರುತ್ತಿದ್ದು, ವ್ಯವಹಾರ ನಡೆಸುವಷ್ಟು ಕನ್ನಡ ಭಾಷಾಜ್ಞಾನ ಇರಬೇಕು.

ಆ. ಹತ್ತಾರು ವರ್ಷಗಳಿಂದ ಕರ್ನಾಟಕದಲ್ಲಿಯೇ ನೆಲೆಸಿದ್ದರೂ ಯಾರಿಗೆ ವ್ಯಾವಹಾರಿಕ ಕನ್ನಡ ಭಾಷಾ ಜ್ಞಾನ ಇಲ್ಲವೋ ಅವರನ್ನು ಈ ಸಮಿತಿಯ ಕಕ್ಷೆಯಲ್ಲಿ ಬರುವಂತಹ ವಿಷಯಕ್ಕೆ ಕನ್ನಡಿಗರೆಂದು ಪರಿಗಣಿಸಲಾಗದು.

7. ಸರ್ಕಾರವು ಕ್ರಮ ಸಂಖ್ಯೆ : ಡಿಪಿಎಆರ್ 37 ಎಸ್‌ಎಲ್‌ಸಿ 84, ದಿನಾಂಕ 2–2–1985ರ ಪತ್ರದಲ್ಲಿ ಕನ್ನಡಿಗರು ಎಂಬ ಪದದ ವ್ಯಾಖ್ಯೆಯನ್ನು ಈ ಕೆಳಕಂಡಂತೆ ಸೂಚಿಸಿದೆ :

"ಕನ್ನಡಿಗರೆಂದರೆ ಅವರಿಗೆ ಕನ್ನಡದಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಬರಬೇಕು–ಎಂದರೆ ಅವರಿಗೆ ವ್ಯಾವಹಾರಿಕ ಕನ್ನಡ ಜ್ಞಾನ ಇರಬೇಕು".

8. 1971ರ ಗಣತಿ ಪ್ರಕಾರ ಕನ್ನಡ ಮಾತನಾಡುವವರ ಸಂಖ್ಯೆ ಕರ್ನಾಟಕದಲ್ಲಿ ಶೇಕಡ 65.94, ಬೆಂಗಳೂರು ನಗರದಲ್ಲಿ ಶೇಕಡ 32.47 ಮಾತ್ರ.

9. ಸಮಿತಿಯು ಮಧ್ಯಕಾಲೀನ ವರದಿಯನ್ನು ದಿನಾಂಕ 13–6–1984 ರಂದು ಹಾಗೂ ಅಂತಿಮ ವರದಿಯನ್ನು ದಿನಾಂಕ 30–12–1986 ರಂದು ಸಲ್ಲಿಸಿದೆ. ತನ್ನ ವರದಿಯನ್ನು ಸಿದ್ಧಪಡಿಸಲು ಸಮಿತಿಯು 51 ಉದ್ಯಮಗಳ ಆಡಳಿತ ವರ್ಗದವರೊಡನೆ ಚರ್ಚೆ ನಡೆಸಿದೆ. 12 ಕನ್ನಡ ಸಂಘಗಳನ್ನು ಸಮಿತಿಯ ಸಭೆಗೆ ಆಹ್ವಾನಿಸಿದೆ. 31 ಉದ್ಯಮಗಳಿಗೆ ಭೇಟಿ ನೀಡಿದೆ. ಸಮಿತಿಯು ವಿವಿಧ ಮಾಹಿತಿಗಳನ್ನು 17 ಕೇಂದ್ರ ಸರ್ಕಾರಿ ವಲಯದ ಉದ್ಯಮಗಳು, 24 ಬ್ಯಾಂಕುಗಳು, 53 ರಾಜ್ಯ ಸರ್ಕಾರಿ ವಲಯದ ಉದ್ಯಮಗಳು, 172 ಖಾಸಗಿ ವಲಯದ ಉದ್ಯಮಗಳು ಮತ್ತು 8 ಕೇಂದ್ರ ಸರ್ಕಾರಿ ಕಛೇರಿಗಳಿಂದ ಪಡೆದಿದೆ.

10. ಡಾ: ಸರೋಜಿನಿ ಮಹಿಷಿ ಸಮಿತಿಯು ಸಲ್ಲಿಸಿರುವ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪುನರಾವಲೋಕಿಸಲು ಮತ್ತು ಅನುಷ್ಠಾನಗೊಳಿಸಲು ಡಾ: ವಿ. ವೆಂಕಟೇಶ್, ಲೋಕಸಭಾ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಉನ್ನತ ಮಟ್ಟದ ಸಮಿತಿ–(ಕನ್ನಡಿಗರ ಉದ್ಯೋಗ ಸಮಿತಿ) ಯನ್ನು ದಿನಾಂಕ 10–5–88 ರಲ್ಲಿ ರಚಿಸಲಾಯಿತು :

1) ಶ್ರೀ ಡಿ.ಬಿ. ಚಂದ್ರೇಗೌಡ, ರಾಜ್ಯ ಸಭಾ ಸದಸ್ಯರು
2) ಶ್ರೀ ಜಿ. ನಾರಾಯಣಕುಮಾರ್, ವಿಧಾನ ಸಭಾ ಸದಸ್ಯರು
3) ಶ್ರೀ ಕೆ. ಪ್ರಭಾಕರ ರೆಡ್ಡಿ
4) ಡಾ: ಪಿ.ವಿ. ನಾರಾಯಣ

11. ಕನ್ನಡಿಗರ ಉದ್ಯೋಗ ಸಮಿತಿಯ ಕಾರ್ಯವ್ಯಾಪ್ತಿ ಈ ಕೆಳಗಿನಂತೆ ಇದ್ದಿತು :

1) ಭಾರತ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುವಂತಹ ಕರ್ನಾಟಕ ರಾಜ್ಯದಲ್ಲಿರುವ ಕೇಂದ್ರ ಸರ್ಕಾರಿ ವಲಯದ ಉದ್ಯಮಗಳಲ್ಲಿ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಹಾಗೂ ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಇರುವ ಉದ್ಯೋಗಾವಕಾಶದ ವಾಸ್ತವಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು.
2) ಈ ಸಂಸ್ಥೆಗಳಲ್ಲಿರುವ ಕನ್ನಡಿಗರ ನೌಕರರ ಸಮಸ್ಯೆ ಹಾಗೂ ಕೊರತೆಗಳನ್ನು ವಿಚಾರಿಸಬಹುದು.
3) ಇವುಗಳಿಗೆ ಪರಿಹಾರ ಒದಗಿಸುವ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

4) ಡಾ : ಸರೋಜಿನಿ ಮಹಿಷಿ ಸಮಿತಿಯ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಅವುಗಳ ಮಹತ್ವ ಮತ್ತು ಗಹನತೆಯನ್ನು ಪರಿಗಣಿಸಿ ಅವುಗಳನ್ನು ಜಾರಿಗೊಳಿಸುವ ಕ್ರಮದ ಮೇಲ್ವಿಚಾರಣೆ ಮಾಡುವುದು.

5) ಈ ದಿಶೆಯಲ್ಲಿ ಉದ್ಭವಿಸುವ ಇನ್ನಾವುದೇ ಮಹತ್ವದ ಕರ್ತವ್ಯವನ್ನು ಸರ್ಕಾರವು ವಹಿಸಿದರೆ ಅಂತಹವುಗಳನ್ನು ಪರಿಶೀಲಿಸಿ ಪರಿಹಾರ ಸೂಚಿಸುವುದು.

12. ಕನ್ನಡಿಗರ ಉದ್ಯೋಗ ಸಮಿತಿಯು ತನ್ನ ಮೊದಲನೆಯ ಸಭೆಯನ್ನು ದಿನಾಂಕ 10–6–88ರಂದು ನಡೆಸಿ, ಹಲವು ನಿರ್ಣಯಗಳನ್ನು ತೆಗೆದುಕೊಂಡು, ಅವುಗಳನ್ನು ಕಾರ್ಯರೂಪಕ್ಕೆ ತರುವಂತೆ ಸರ್ಕಾರವನ್ನು ಕೋರಿದ್ದರ ಮೇರೆಗೆ ಈ ಕೆಳಕಂಡ ಆದೇಶಗಳು ಹೊರಟಿವೆ :

1) ಸಮಿತಿಯ ಶಿಫಾರಸ್ಸಿನಂತೆ ಹಲವು ವಿಶೇಷ ಪ್ರಕರಣಗಳನ್ನು ಹೊರತುಪಡಿಸಿ ಎಲ್ಲಾ ಹುದ್ದೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ರಿಕ್ತ ಸ್ಥಾನಗಳನ್ನು ಜಾಹೀರಾತುಗೊಳಿಸುವಾಗ ಕರ್ನಾಟಕ ರಾಜ್ಯಪತ್ರದಲ್ಲಿ ಮತ್ತು ಕರ್ನಾಟಕದಲ್ಲಿ ಮುದ್ರಿತವಾಗುವ ಪತ್ರಿಕೆಗಳಲ್ಲಿ ಮಾತ್ರ ಪ್ರಕಟಿಸಬೇಕೆಂದು ಸರ್ಕಾರವು ಕ್ರಮಾಂಕ : ಸಿಆಸುಇ 83 ಸೇವನೆ 88 ದಿನಾಂಕ 14–11–88ರಂದು ಸುತ್ತೋಲೆಯನ್ನು ಹೊರಡಿಸಿದೆ.

2) ಸರ್ಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಂದರ್ಶನವನ್ನು ನಡೆಸುವಾಗ ಕರ್ನಾಟಕ ಲೋಕ ಸೇವಾ ಆಯೋಗ/ನೇಮಕಾತಿ ಸಮಿತಿಗಳು ಹಾಗೂ ನೇಮಕಾತಿ ಪ್ರಾಧಿಕಾರಗಳು ಅಭ್ಯರ್ಥಿಗಳನ್ನು ಸಂಪೂರ್ಣ ಕನ್ನಡದಲ್ಲಿಯೇ ಪ್ರಶ್ನಿಸಿ, ಉತ್ತರ ಪಡೆಯಬೇಕೆಂದು ಸಮಿತಿಯು ಮಾಡಿದ್ದ ಶಿಫಾರಸ್ಸನ್ನು ಒಪ್ಪಿ, ಸರ್ಕಾರವು ಸಂಖ್ಯೆ : ಸಿಆಸುಇ 84 ಸೇವನೆ 88, ದಿನಾಂಕ 16–11–1988ರಂದು ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಿದೆ.

13. ಕನ್ನಡಿಗರ ಉದ್ಯೋಗ ಸಮಿತಿಯು ದಿನಾಂಕ 19–8–88ರಂದು ಪ್ರಥಮ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿತು. ಇದರಲ್ಲಿನ ಶಿಫಾರಸ್ಸುಗಳು ಪ್ರಮುಖವಾಗಿ ಎರಡು ಉದ್ದೇಶಗಳನ್ನು ಹೊಂದಿದ್ದವು.

1) ಖನಿಜ ಹಾಗೂ ಪ್ರಾಕೃತಿಕ ಸಂಪನ್ಮೂಲಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಈ ಸಂಪನ್ಮೂಲಗಳ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ನೀಡುವುದರ ಮೂಲಕ ಉದ್ಯೋಗಾವಕಾಶಗಳನ್ನು ಅಭಿವೃದ್ಧಿಪಡಿಸುವುದು.

2) ಇದಕ್ಕೆ ಪೂರಕವಾಗಿರುವ ಹಾಗೂ ಹೊಸ ತಾಂತ್ರಿಕ ಜ್ಞಾನದಲ್ಲಿ ಸ್ಥಳೀಯರಿಗೆ ಶಿಕ್ಷಣ ಹಾಗೂ ತರಬೇತಿ ನೀಡುವುದರ ಮೂಲಕ ಅವರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.

14. ಕನ್ನಡಿಗರ ಉದ್ಯೋಗ ಸಮಿತಿಯು ದಿನಾಂಕ 19–11–88ರಂದು ದ್ವಿತೀಯ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಇದರಲ್ಲಿನ ಶಿಫಾರಸ್ಸುಗಳು ಪ್ರಮುಖವಾಗಿ ಈ ಕೆಳಕಂಡ ಅಂಶಗಳಿಗೆ ಸಂಬಂಧಪಟ್ಟಿವೆ :

1) ಜೀವ ಪರಿಸ್ಥಿತಿ ಮತ್ತು ಪರಿಸರ ಹಾಗೂ ಭೌಗೋಳಿಕ ಲಕ್ಷಣಗಳಿಗೆ ಅನುಗುಣವಾಗಿ ವಾತಾವರಣಕ್ಕೆ ತಕ್ಕ ಹಾಗೆ ಕೈಗಾರಿಕೆಗಳ ಸೃಷ್ಟಿಗೆ ಅವಕಾಶ ನೀಡುವುದು. ಇದರಿಂದ ಸ್ಥಳೀಯ ಜನರಿಗೆ ಉದ್ಯೋಗ ಕಲ್ಪಿಸುವ ಅವಕಾಶ ಲಭಿಸುತ್ತದೆ.

2) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಲು ಅಭ್ಯರ್ಥಿಯು 15 ವರ್ಷ ರಾಜ್ಯದಲ್ಲಿ ವಾಸವಾಗಿರಬೇಕೆಂಬ ನಿಯಮವು ಜುಲೈ 1981 ರಿಂದಲೇ ಜಾರಿಗೆ ಬಂದಿರುವುದರಿಂದ, ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟಿರುವ ಸಾರ್ವಜನಿಕ ವಲಯದ ಕೈಗಾರಿಕಾ-ಘಟಕಗಳು, ಸಂಸ್ಥೆಗಳು ಹಾಗೂ ನಾಗರಿಕ ಸೇವಾ ಹುದ್ದೆಗಳು, ಸರ್ಕಾರದಿಂದ ಅಥವಾ ಸ್ಥಳೀಯ ಸಂಸ್ಥೆಗಳಿಂದ ಅನುದಾನ ಅಥವಾ ಮಾನ್ಯತೆ ಅಥವಾ ಪರವಾನಗಿ ಪಡೆದ ಶಿಕ್ಷಣ ಸಂಸ್ಥೆಗಳು, ಸಹಕಾರ ಸಂಘಗಳು, ಖಾಸಗಿ ಆಸ್ಪತ್ರೆಗಳು ಇತ್ಯಾದಿಗಳಲ್ಲಿ ನೇಮಕಾತಿಗೆ ಅರ್ಜಿಗಳನ್ನು ಸಲ್ಲಿಸಲು ಇರಬೇಕಾದ ಅರ್ಹತೆಗಳಲ್ಲಿ ಅಭ್ಯರ್ಥಿಯು ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತನ್ನ ಹೆಸರನ್ನು ನೋಂದಣಿ ಮಾಡಿಸಿರಬೇಕು ಎಂಬ ಹೊಸ ನಿಯಮವನ್ನು ನಿಗದಿಪಡಿಸಬೇಕು. ಇದರಿಂದ ನೇಮಕಗಳಲ್ಲಿ ಕನ್ನಡಿಗರಿಗೆ ಅವಕಾಶ ಲಭ್ಯವಾಗುತ್ತದೆ.

15. ಕನ್ನಡಿಗರ ಉದ್ಯೋಗ ಸಮಿತಿಯು ದಿನಾಂಕ 19–2–89ರಂದು ತೃತೀಯ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಇದರಲ್ಲಿನ ಶಿಫಾರಸ್ಸುಗಳು ಪ್ರಮುಖವಾಗಿ, ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಮತ್ತು ಅವುಗಳ ಬೆಳವಣಿಗೆಯಿಂದಾಗಿ ಉದ್ಯೋಗಗಳ ಹೆಚ್ಚಳ, ನೀರಾವರಿ ಕಾಮಗಾರಿಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ಮತ್ತು ವಿವಿಧ ಕಾರ್ಯಗಳಲ್ಲಿ ಕನ್ನಡಿಗರ ಹಿತಾಸಕ್ತಿಯ ರಕ್ಷಣೆ, ಖಾಸಗಿ ವಲಯದಲ್ಲಿ ಉದ್ಯೋಗ ನಿರ್ಮಾಣ ಇವುಗಳಿಗೆ ಸಂಬಂಧಿಸಿದೆ.

16. ಕನ್ನಡಿಗರ ಉದ್ಯೋಗ ಸಮಿತಿಯು ತನ್ನ ಕಾರ್ಯಭಾರವನ್ನು ಪೂರ್ಣಗೊಳಿಸದೇ ಇದ್ದ ಕಾರಣ, ಅದನ್ನು ದಿನಾಂಕ 15–11–1989 ರಂದು ಅಂತ್ಯಗೊಳಿಸಿ, ಡಾ: ಸರೋಜಿನಿ ಮಹಿಷಿ ಸಮಿತಿ ಮತ್ತು ಡಾ: ವೆಂಕಟೇಶ್ ಸಮಿತಿ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಕಾನೂನು, ಸಂಸದೀಯ, ಯೋಜನೆ ಮತ್ತು ಪ್ರವಾಸೋದ್ಯಮ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯೊಂದನ್ನು ದಿನಾಂಕ 16–3–1990ರಂದು ಸರ್ಕಾರವು ರಚಿಸಿತು.

17. ಈ ಸಚಿವ ಸಂಪುಟದ ಉಪ ಸಮಿತಿಯ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಸಲ್ಲಿಸಿದ ಶಿಫಾರಸ್ಸುಗಳನ್ನು ಸಚಿವ ಸಂಪುಟವು ದಿನಾಂಕ 30–10–1990ರಂದು ಅನುಮೋದಿಸಿತು ಮತ್ತು ಅಂಗೀಕರಿಸಿತು. ಅದರಂತೆ ಸರ್ಕಾರಿ ಆದೇಶ ಸಂಖ್ಯೆ :ಸಿಆಸುಇ 9 ಎಸ್‌ಎಲ್‌ಸಿ 90, ದಿನಾಂಕ 23–11–1990ರಂದು ಹೊರಟಿದ್ದು, ಅದು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 20–12–1990 ರಂದು ಪ್ರಕಟವಾಗಿದೆ.

18. ಈ ಆದೇಶದಲ್ಲಿ ನಮೂದಿಸಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವ ಕಾರ್ಯವನ್ನು ಇಲಾಖೆಗಳ ಸರ್ಕಾರದ ಕಾರ್ಯದರ್ಶಿಗಳಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದಿನಾಂಕ 29–11–1990 ರಂದು ಅನಧಿಕೃತ ಟಿಪ್ಪಣಿ ಹೊರಡಿಸಿದೆ.

| ಶಿಫಾರಸ್ಸು ಸಂಖ್ಯೆ | | ಇಲಾಖೆ |
|---|---|---|
| 1,5,7 ರಿಂದ 19,29,43,44,57 | : | ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ |
| 2,4,21(ಅ),24,25,28,30,31,40,41,42,50 | : | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ |
| 2,3,6,20,50 ಸಾಮಾನ್ಯ ಶಿಫಾರಸ್ಸು (4) | : | ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮ |
| 20,34,35,36 | : | ಸೇವಾ ನಿಯಮ–ಬಿ |
| 23 | : | ಕಂದಾಯ ಇಲಾಖೆ |
| 33 | : | ಸಿಆಸುಇ (ಸೇವೆಗಳು) |
| 45,46 | : | ಲೋಕೋಪಯೋಗಿ ಮತ್ತು ಕಾಡಾ ಇಲಾಖೆ |
| 49 | : | ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ |
| 8,58 | : | ಸೇವಾ ನಿಯಮ–ಎ |

19. ಡಾ. ಸರೋಜಿನಿ ಮಹಿಷಿ ಸಮಿತಿ ಮತ್ತು ಕನ್ನಡಿಗರ ಉದ್ಯೋಗ ಸಮಿತಿಯು ಸಲ್ಲಿಸಿರುವ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮತ್ತು ವಿವಿಧ ಇಲಾಖೆಗಳು ಶಿಫಾರಸ್ಸುಗಳನ್ನು ಜಾರಿಗೊಳಿಸಿದ ಪ್ರಗತಿಯನ್ನು ನಾಲ್ಕು ತಿಂಗಳಿಗೊಮ್ಮೆ ಪುನರಾವಲೋಕಿಸಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 55 ಸೇಸ್ಥಆ 90, ದಿನಾಂಕ 13–12–1990 ರಂದು ರಚಿಸಲಾಯಿತು. ಈ ಉನ್ನತ ಮಟ್ಟದ ಅಧಿಕಾರಿಗಳ ಮೊದಲನೆಯ ಸಭೆಯು ದಿನಾಂಕ 1–2–1991 ರಂದು ನಡೆಯಿತು.

20. ಉನ್ನತ ಮಟ್ಟದ ಅಧಿಕಾರಿಗಳ ಎರಡನೆ ಸಭೆಯು ದಿನಾಂಕ 7–9–91 ರಂದು ನಡೆಯಿತು. ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹಾ ನಿರ್ದೇಶಕರು, ಎಲ್ಲಾ ಸಾರ್ವಜನಿಕ ಉದ್ದಿಮೆಗಳಲ್ಲಿ ಈಗಿದ್ದ ತರಹ ಯಾವ ನೇಮಕಾತಿಗಳನ್ನು ಮಾಡುತ್ತಿಲ್ಲವೆಂದು ಇದುವರೆಗೆ ಬಂದಿರುವ ವರದಿಗಳ ಪ್ರಕಾರ 'ಸಿ' ಮತ್ತು 'ಡಿ' ವೃಂದದ ಹುದ್ದೆಗಳಲ್ಲಿ ಶೇಕಡ 90 ರಷ್ಟು ಕನ್ನಡಿಗರಿದ್ದಾರೆಂದು ತಿಳಿಸಿದರು. ಸಾರ್ವಜನಿಕ ಉದ್ದಿಮೆಗಳಲ್ಲಿ ಈ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಒತ್ತಡ ತರಬೇಕೆಂದು ಸೂಚಿಸಲಾಯಿತು. ಬೆಂಗಳೂರಿನಲ್ಲಿ ನೇಮಕಾತಿ ಬಗ್ಗೆ ನೈರುತ್ಯ ರೈಲ್ವೆಯ ಒಂದು ವಿಭಾಗೀಯ ಕೇಂದ್ರ ಕಛೇರಿಯನ್ನು ತೆಗೆಯಲು ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಯೊಡನೆ ವ್ಯವಹರಣೆ ಮುಂದುವರಿಸಬೇಕೆಂದು ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಯಿತು.

21. ದಿನಾಂಕ 30–7–1991 ರಲ್ಲಿ ಡಾ. ಸರೋಜಿನಿ ಮಹಿಷಿ ಸಮಿತಿ ಶಿಫಾರಸ್ಸುಗಳನ್ನು ಜಾರಿಗೊಳಿಸುವುದನ್ನು ನೋಡಿಕೊಳ್ಳಲು ಅಂದಿನ ಸರ್ಕಾರವು ಸಚಿವ ಸಂಪುಟದ ಉಪ ಸಮಿತಿಯೊಂದನ್ನು ಖಾಯಂ ಆಗಿ ನೇಮಿಸಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

22. ಆದೇಶ ಸಂಖ್ಯೆ ಡಿಪಿಎಆರ್ 18 ಕೆಒಎಲ್ 92, ದಿನಾಂಕ 6–2–92ರಲ್ಲಿ ಡಾ. ಸರೋಜಿನಿ ಮಹಿಷಿ ಸಮಿತಿ ವರದಿ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ತರುವ ಉದ್ದೇಶದಿಂದ ಕಾರ್ಯವಿಧಾನಗಳನ್ನು ರೂಪಿಸಲು ಕೆಳಕಂಡ ಸದಸ್ಯರನ್ನೊಳಗೊಂಡಂತೆ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಸರ್ಕಾರವು " **ಕನ್ನಡ ಅಭಿವೃದ್ಧಿ ಪ್ರಾಧಿಕಾರ** " ವನ್ನು ರಚಿಸಿದೆ.

1) ಡಾ. ಸಿದ್ಧಯ್ಯ ಪುರಾಣಿಕ್

2) ಡಾ. ಹಾ.ಮಾ. ನಾಯಕ್

3) ಪ್ರೊ. ಎಸ್.ಎಸ್. ಒಡೆಯರ್

4) ಶ್ರೀ ಬಿ.ಎಂ. ಇದಿನಬ್ಬ

5) ಶ್ರೀ ಶಿವಶರಣಪ್ಪ ವಾಲಿ

6) ಶ್ರೀಮತಿ ಬಿ.ಟಿ. ಲಲಿತಾ ನಾಯಕ್

7) ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಅದೇ ಸಂಖ್ಯೆಯ ದಿನಾಂಕ 29–2–92ರ ಆದೇಶದಲ್ಲಿ ಡಾ. ಸಿದ್ಧಲಿಂಗಯ್ಯನವರನ್ನು ಸದಸ್ಯರನ್ನಾಗಿ ನೇಮಿಸಿತು.

30–6–1992ರ ಅದೇ ಸಂಖ್ಯೆಯ ಆದೇಶದಲ್ಲಿ

1) ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ.

2) ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

3) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

4) ನಿರ್ದೇಶಕರು, ಭಾಷಾಂತರ ಇಲಾಖೆ.

ಇವರುಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರುಗಳನ್ನಾಗಿ ನೇಮಕ ಮಾಡಲಾಯಿತು.

23. ಸರ್ಕಾರವು ದಿನಾಂಕ 11–11–1992 ರಲ್ಲಿ ಹೊರಡಿಸಿರುವ ಆದೇಶದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಕಾರ್ಯಗಳಲ್ಲಿ ಒಂದು ಅಂಶವಾಗಿ ಈ ಕೆಳಕೊಂಡಂತೆ ಹೇಳಲಾಗಿದೆ :

"ಪ್ರಾಧಿಕಾರವು ಸರ್ಕಾರ ಅಂಗೀಕರಿಸಿರುವ ಡಾ: ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಅಗತ್ಯವಾದ ಕ್ರಮ ಕೈಗೊಳ್ಳುವುದು"

24. ಹೀಗೆ ನಿಗದಿತವಾದ ಪ್ರಕಾರ್ಯವನ್ನು ನೆರವೇರಿಸುವ ಉದ್ದೇಶದಿಂದ ಪ್ರಾಧಿಕಾರ ಕಾರ್ಯಾರಂಭ ಮಾಡಿದಂದಿನಿಂದ ಈ ಸಂಬಂಧದಲ್ಲಿ ಅಧಿಕಾರಿಗಳ ಅನೇಕ ಸಭೆಗಳನ್ನು ನಡೆಸಿದೆ. ಕೆಲವು ಉದ್ಯಮಗಳಿಗೆ ಭೇಟಿ ನೀಡಲಾಗಿದೆ ಮತ್ತು ಮೊದಲ ಬಾರಿಗೆ ಇಂತಹ ಸಂಕಲನವನ್ನು ಹೊರತರುತ್ತಿದೆ.

25. ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯಲ್ಲಿ 58 ಶಿಫಾರಸ್ಸುಗಳು ಇವೆ. ಇವುಗಳಲ್ಲಿ ಶಿಫಾರಸ್ಸು ಸಂಖ್ಯೆ 22,27,32,37,38,39,47,51,52,54,55 ಮತ್ತು 56 ಗಳನ್ನು (ಒಪ್ಪುವ ಅವಕಾಶವಿಲ್ಲವೆಂದು) ಕೈಬಿಡಲಾಗಿದೆ. ಶಿಫಾರಸ್ಸು ಸಂಖ್ಯೆ 53ಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ **"ಸ್ಟಾಫ್ ಸೆಲೆಕ್ಷನ್ ಕಮಿಷನ್ ಆಫ್ ಇಂಡಿಯಾ"** ಇದರ ಒಂದು ಶಾಖೆಯನ್ನು ಆದೇಶದ ದಿನಾಂಕಕ್ಕೆ ಮೊದಲೇ ತೆರೆದಿರುವುದರಿಂದ ಇದನ್ನು ಸರ್ಕಾರಿ ಆದೇಶದಲ್ಲಿ ಕೈಬಿಡಲಾಗಿದೆ. ಉಳಿದ 45 ಶಿಫಾರಸ್ಸುಗಳು ಆದೇಶದಲ್ಲಿ ಅಂಗೀಕರಿಸಲ್ಪಟ್ಟು ಅನುಮೋದಿತವಾಗಿವೆ. ಈ ಶಿಫಾರಸ್ಸುಗಳಲ್ಲಿ ಎರಡು ಮಾರ್ಪಾಡುಗಳನ್ನು ಆದೇಶದಲ್ಲಿ ಮಾಡಲಾಗಿದೆ. ಅವು,

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಲು ಜನನ ಪ್ರಮಾಣ ಪತ್ರದ ಅವಶ್ಯಕತೆ ಇರುವುದಿಲ್ಲ

ಮತ್ತು

2) ಅಂಚೆ ಮುಖಾಂತರ ನೋಂದಾಯಿಸುವುದನ್ನು ತೆಗೆದುಹಾಕಲಾಗಿದೆ.

26. ಕನ್ನಡಿಗರಿಗೆ ಉದ್ಯೋಗ ದೊರೆಯುವ ಬಗ್ಗೆ, ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 9 ಎಸ್‌ಎಲ್‌ಸಿ 90, ದಿನಾಂಕ 23–11–1990 ಕ್ಕೆ ತೃಪ್ತಿಕರವಾದ ಅನುಸರಣಾ ಕ್ರಮವು ಪೂರ್ಣವಾಗಿ ಆಗುವವರೆಗೆ ಈ ಸಂಕಲನವನ್ನು ಕಾಲಕಾಲಕ್ಕೆ ಪರಿಷ್ಕರಿಸುವುದು ಅತ್ಯವಶ್ಯವಾಗಿದೆ.

–ಹೆಚ್.ಜಿ. ಶ್ರೀವರ, ಕ.ಆ.ಸೇ.
ಕಾರ್ಯದರ್ಶಿ.
ಕನ್ನಡ ಅಭಿವೃದ್ಧಿ ಪ್ರಾಧಿಕಾರ.